# ವಿಪಶ್ಯನ ವಾರ್ತೆ
# VIPASSANA VARTE

ಕನ್ನಡ ಮಾಸಪತ್ರಿಕೆ, **10 ಮಾರ್ಚ್ 2024** ಬೆಂಗಳೂರು, ಸಂಪುಟ 9, ಸಂಚಿಕೆ 11, ಪುಟಗಳು-4. **ಸಂಪಾದಕರು** : ಜಿ.ಟಿ.ಗೋವಿಂದಪ್ಪ
Kannada monthly, **10 March 2024**, Bengaluru, Vo 9, Issue No.11 Pages-4, KARKAN2015/68727 **Editor**: G.T. Govindappa.

ಚಂದಾ: ವಾರ್ಷಿಕ ರೂ. 30, ಆಜೀವ : ರೂ. 500.
ಪ್ರಕಾಶನ: ಕರ್ನಾಟಕ ವಿಪಶ್ಯನ ಪ್ರಚಾರ ಸಮಿತಿ ಟ್ರಸ್ಟ್.

Subscription : Annual Rs. 30; Life : Rs. 500/-
Published by: Karnataka Vipassana Prachara Samiti Trust.


## ಧಮ್ಮ ಪದಗಳು

ದುಪ್ಪಬ್ಬಜ್ಜಂ ದುರಭಿರಮಂ,
ದುರಾವಾಸಾ ಘರಾ ದುಖಾ
ದುಕ್ಖೋಸಮಾನಸಂವಾಸೋ,
ದುಕ್ಖಾನುಪತಿತದ್ಧಗೂ ;
ತಸ್ಮಾ ನ ಚದ್ಧಗೂ ಸಿಯಾ,
ನ ಚ ದುಕ್ಖಾನುಪತಿತೋ ಸಿಯಾ.

ಶ್ರಮಣ ಜೀವನವು ಕಷ್ಟಕರ. ಅದರಲ್ಲಿಯೇ ಆನಂದ ಕಾಣುವುದೂ ಕಷ್ಟಕರ. ಹಾಗೆಯೇ ಸಾಂಸಾರಿಕ ಜೀವನವು ದುಃಖಕರ ಮತ್ತು ಕಷ್ಟಕರ. ಅಸಮಾನರ ಒಡನಾಟ ದುಃಖ ತರುತ್ತದೆ. ಸಂಸಾರದಲ್ಲಿ ಸುತ್ತಾಡುವಿಕೆ ದುಃಖ ತರುತ್ತದೆ. ಆದ್ದರಿಂದ ಗುರಿಯಿಲ್ಲದ ಅಲೆಮಾರಿಯಾಗದಿರು, ದುಃಖದ ಹಿಂಬಾಲಕನಾಗದಿರು.

ಧಮ್ಮಪದ –302, ಮಿಶ್ರವರ್ಗ

## ಬಾಬಾರವರಿಗೆ ಗೌರವಾರ್ಪಣೆ

ಆಚಾರ್ಯ ಶ್ರೀ ಎಸ್.ಎನ್. ಗೋಯಂಕ (1914–2013)

**(ಸಯಾಜಿ ಉ ಬಾ ಖಿನ್ ಜರ್ನಲ್‌ನಿಂದ ಅನುವಾದಿಸಲಾಗಿದೆ.)**

"ವ್ಯಕ್ತಿಯು ತಾನು ಕೊಡುವ ಸಾಲದ ಅಸಲಿಗಿಂತ ಅದರಿಂದ ಬರುವ ಬಡ್ಡಿಯ ಕಡೆಗೇ ಯಾವಾಗಲೂ ಹೆಚ್ಚು ಆಸಕ್ತನಾಗಿರುತ್ತಾನೆ." ಈ ಹಿಂದಿ ಜನಪದ ಗಾದೆಯಂತೆ, ಸಾಮಾನ್ಯವಾದ ನಂಬಿಕೆ ಎಂದರೆ, ತಾತನು ತನ್ನ ಮಗನಿಗಿಂತ ತನ್ನ ಮೊಮ್ಮಗನ ಮೇಲೆ ಹೆಚ್ಚು ಪ್ರೀತಿ ಮತ್ತು ಅಕ್ಕರೆಯನ್ನು ಹೊಂದಿರುತ್ತಾನೆ. ಬಹುಶಃ ಇದರ ಪ್ರತಿಫಲವಾಗಿ ಮೊಮ್ಮಗನು ತನ್ನ ತಂದೆಗಿಂತ ತನ್ನ ತಾತನಲ್ಲಿ ಹೆಚ್ಚು ಅಕ್ಕರೆಯನ್ನು ಹೊಂದಿರುತ್ತಾನೆ.

ನನ್ನ ಸ್ವಂತ ಅನುಭವದಿಂದ, ಈ ನಂಬಿಕೆಯು ಬಹಳ ಸರಿ ಇದೆ ಎಂದು ನನಗೆ ತೋರುತ್ತದೆ. ನನ್ನ ತಾತನವರಾದ ಬಸೇಸರ್‌ಲಾಲ್‌ಜಿ ಅವರು ತಮ್ಮ 73ನೇ ಮಾಗಿದ ವಯಸ್ಸಿನಲ್ಲಿ ಮರಣಿಸಿದಾಗ ನನಗೆ ಏಳು ಅಥವಾ ಎಂಟು ವರ್ಷಗಳಿದ್ದಿರಬಹುದು. ಆದರೂ ನನ್ನ ಬಾಲ್ಯದ ಸ್ಪಷ್ಟ ನೆನಪುಗಳು ಅವರ ಸುತ್ತಲೇ ಕೇಂದ್ರೀಕೃತವಾಗಿರುವುದು ಮೇಲಿನ ನಂಬಿಕೆಯನ್ನು ದೃಢಪಡಿಸುತ್ತದೆ.

ಬಾಬಾರವರ ಕೆಲವು ಮಾತುಗಳು ನನ್ನ ಹೃದಯಕ್ಕೆ ಆಳವಾಗಿ ನಾಟಿ ನನ್ನ ಜೀವನದ ಮೇಲೆ ಶಾಶ್ವತವಾದ ಪರಿಣಾಮ ಬೀರಿದವು. ಬರ್ಮಾ ದೇಶದ ಮೇಲೆ ಮತ್ತು ಅಲ್ಲಿನ ಜನರ ಮೇಲೆ ಅವರು ಬಹಳ ಗೌರವ ಭಾವ ಹೊಂದಿದ್ದರು. ಬರ್ಮಾದ ಅವರ ಕೆಲವು ನೆನಪುಗಳು ಈಗಲೂ ನನ್ನ ಮನಸ್ಸಿನಲ್ಲಿ ಅಚ್ಚ ಹಸಿರಾಗಿವೆ. ಅವರು ಆಗಿಂದಾಗ್ಗೆ ನೆನಪಿಸಿಕೊಳ್ಳುತ್ತಿದ್ದ ಒಂದು ಘಟನೆ ಹೀಗಿದೆ.

ಅವರು ಬಟ್ಟೆಗಳನ್ನು ಮಾರುತ್ತಾ ಊರಿಂದ ಊರಿಗೆ ಪ್ರಯಾಣಿಸುತ್ತಿದ್ದರು. ಸಾರಿಗೆಗಾಗಿ ಅವರು ಕುದುರೆಗಳನ್ನು ಮತ್ತು ಹೇಸರಗತ್ತೆಗಳನ್ನು ಉಪಯೋಗಿಸುತ್ತಿದ್ದರು. ಈ ಸುತ್ತಾಟದಲ್ಲಿ ಅವರು ಭೇಟಿಕೊಡುತ್ತಿದ್ದ ಬರ್ಮಾದ ಒಂದು ಭಾಗವೆಂದರೆ, ಪೂರ್ವ ಬರ್ಮಾದ ಪರ್ವತಮಯ ಶಾನ್ ಪ್ರಸ್ಥಭೂಮಿ (ಬೆಟ್ಟದ ಮೇಲೆ ಸಮತಲವಾಗಿರುವ ಭೂಮಿ). ಅಲ್ಲಿ ಪ್ರತಿಯೊಂದು ಪ್ರದೇಶದಲ್ಲಿ ವಾರದ ಸಂತೆಯನ್ನು ಸಂಘಟಿಸಲಾಗುತ್ತಿತ್ತು. ನನ್ನ ತಾತನ ತರಹದ ವ್ಯಾಪಾರಸ್ಥರ ಅನುಕೂಲಕ್ಕಾಗಿ ಬೇರೆ ಬೇರೆ ದಿನಗಳಲ್ಲಿ ವಾರದ ಸಂತೆಯನ್ನು ಏರ್ಪಡಿಸಲಾಗುತ್ತಿತ್ತು. ಒಂದು ಸ್ಥಳದ ಸಂತೆಯನ್ನು ಮುಗಿಸಿಕೊಂಡು ಎರಡು ಅಥವಾ ಮೂರು ದಿನ ಪ್ರಮಾಣ ಮಾಡಿ ಮುಂದಿನ ಸ್ಥಳದ ಸಂತೆಗೆ ಸರಿಯಾದ ಸಮಯಕ್ಕೆ ಹೋಗಲು ಇದು ಅನುಕೂಲಮಾಡುತ್ತಿತ್ತು. ಈ ರೀತಿಯಾಗಿ ಬಾಬಾರವರು ಕ್ರಮೇಣವಾಗಿ ದಾರಿಯಲ್ಲಿ ಸಿಗುವ ಎಲ್ಲಾ ಸಂತೆಗಳಲ್ಲಿ ಮಾರಾಟ ಮಾಡುತ್ತಾ ಕೊನೆಗೆ ಮ್ಯಾಂಡಲೆಯಲ್ಲಿನ ಕುಟುಂಬದ ಮನೆಗೆ ಹಿಂದಿರುಗುತ್ತಿದ್ದರು.

ತಮ್ಮ ಪ್ರಯಾಣದಲ್ಲಿ ಬಾಬಾರವರು ಪ್ರತಿ ರಾತ್ರಿ ಒಂದು ಸಾರ್ವಜನಿಕ ವಿಶ್ರಾಂತಿ ಗೃಹದಲ್ಲಿ ತಂಗುತ್ತಿದ್ದರು. ಬರ್ಮಿ ಭಾಷೆಯಲ್ಲಿ ಈ ವಿಶ್ರಾಂತಿ ಗೃಹಗಳನ್ನು 'ಜೆಯತ್' ಎಂದು ಕರೆಯಲಾಗುತ್ತಿತ್ತು. ಅವುಗಳನ್ನು ಮ್ಯಾನ್ಮಾರ್‌ನ ಕೆಲವು ಭಾಗಗಳಲ್ಲಿ ಈಗಲೂ ಉಪಯೋಗಿಸುತ್ತಿದ್ದಾರೆ. ಈ ವಸತಿಯು ಎತ್ತರದ ಮೇಲ್ಛಾವಣಿ ಇರುವ ಒಂದು ಪಡಸಾಲೆ. ಇದಕ್ಕೆ ಗೋಡೆಗಳು ಇರುವುದಿಲ್ಲ. ಪ್ರಯಾಣಿಕನು ತನ್ನ ಸಾಮಾನುಗಳನ್ನು ಅದರ ಜಗಲಿಯ ಮೇಲೆ ಇಟ್ಟು ರಾತ್ರಿ ತಂಗಿದ್ದು ಬೆಳಿಗ್ಗೆ ತನ್ನ ಪ್ರಯಾಣವನ್ನು ಮುಂದುವರಿಸುತ್ತಾನೆ. 'ಜೆಯತ್' ನಲ್ಲಿ ತಂಗುವುದಕ್ಕೆ ಯಾವುದೇ ಶುಲ್ಕವಿಲ್ಲ. ಸ್ಥಳೀಯ ಗ್ರಾಮಸ್ಥರು ಪ್ರಯಾಣಿಕರಿಗೆ ಸೇವೆ ಮಾಡುವ ದೃಷ್ಟಿಯಿಂದ ಇವುಗಳನ್ನು ಕಟ್ಟಿ, ಸ್ವಚ್ಛವಾಗಿಟ್ಟು ಕುಡಿಯುವ ನೀರಿನ ವ್ಯವಸ್ಥೆಯನ್ನೂ ಮಾಡಿರುತ್ತಾರೆ.

ಅಂದಿನ ದಿನಗಳಲ್ಲಿ ಎಲ್ಲಾ ವ್ಯಾಪಾರ ವಹಿವಾಟಗಳಿಗೂ ಬೆಳ್ಳಿಯ ನಾಣ್ಯವನ್ನು ಉಪಯೋಗಿಸಲಾಗುತ್ತಿತ್ತು ಎಂದು ಬಾಬಾ ಹೇಳಿದರು. ಅವರು ಬೆಳ್ಳಿ ನಾಣ್ಯಗಳನ್ನು ಬೆಲ್ಟಿನಾಕಾರದ ಚೀಲದಲ್ಲಿ ಹಾಕಿ ಸೊಂಟಕ್ಕೆ ಕಟ್ಟಿಕೊಳ್ಳುತ್ತಿದ್ದರಂತೆ. ರಾತ್ರಿ ಮಲಗುವಾಗ ಈ ಹಣದ ಬೆಲ್ಟನ್ನು ಬಿಚ್ಚಿ ತಲೆದಿಂಬಿನ ಕೆಳಗಿಟ್ಟುಕೊಂಡು ನಿದ್ರಿಸುತ್ತಿದ್ದರು. ಒಮ್ಮೆ, ಸೂರ್ಯೋದಯದ ಮೊದಲೇ ತಮ್ಮ ಪ್ರಯಾಣವನ್ನು ಆರಂಭಿಸಲು ನಿರ್ಧರಿಸಿದರು. ಆದರೆ ತಡವಾಗಿ ಎದ್ದು ಅವಸರದಲ್ಲಿ ತಮ್ಮ ಸಾಮಾನುಗಳನ್ನು ಕುದುರೆ ಮೇಲೆ ಹೇರಿಕೊಂಡು ಹೊರಟುಬಿಟ್ಟರು. ಐದಾರು ಗಂಟೆಗಳ ಪ್ರಯಾಣದ ನಂತರ ಹಣದ ಚೀಲ ತಮ್ಮ ಸೊಂಟದಲ್ಲಿ ಇಲ್ಲದಿರುವುದನ್ನು ಕಂಡು 'ಜೆಯತ್'ನಲ್ಲಿ ಬಿಟ್ಟು ಬಂದಿರಬಹುದೆಂದು ಅನುಮಾನಿಸಿದರು. ಅದನ್ನು ಮರಳಿ ಪಡೆಯುವ ಆತಂಕದಲ್ಲಿ, ತಕ್ಷಣ ಹಿಂದಕ್ಕೆ ಹೋಗಲು ಕುದುರೆ ಮಾಲೀಕರಿಗೆ ಹೇಳಿದರು. ಆದರೆ ಅವರು ಇದನ್ನು ಸಾರಾಸಗಟಾಗಿ ತಿರಸ್ಕರಿಸಿದರು. "ನೀವು ಮುಂದಿನ ಮಾರುಕಟ್ಟೆಯ ಕೆಲಸ ಮುಗಿಸಿ ನಂತರ ಹಿಂದಿರುಗುವುದು ಒಳ್ಳೆಯದು. ನೀವು ಹಿಂದಿರುಗಿದಾಗ ನಿಮ್ಮ ಹಣದ ಬೆಲ್ಟ್ ನಿಮಗಾಗಿ ಕಾಯುತ್ತಿರುತ್ತದೆ" ಎಂದು ಹೇಳಿದರು.

ಭಯವಾದರೂ ಕುದುರೆ ನಡೆಸುವವರ ಸಲಹೆಯನ್ನು ಒಪ್ಪಿಕೊಳ್ಳದೆ ಬಾಬಾರವರಿಗೆ ಅನ್ಯಮಾರ್ಗವಿರಲಿಲ್ಲ. ನಾಲ್ಕೈದು ದಿನಗಳಾದ ನಂತರವೇ ಈ ವಿಶ್ರಾಂತಿ ಗೃಹಕ್ಕೆ ವಾಪಾಸು ಬರಲು ಅವರಿಗೆ ಸಾಧ್ಯವಾಯಿತು. ಅದು ಹತ್ತಿರವಾಗುತ್ತಿದ್ದಂತೆಯೇ "ನನ್ನ ದುಡಿಮೆಯಷ್ಟೇ ಅಲ್ಲ ನನ್ನ ಬಂಡವಾಳವೂ ನಷ್ಟವಾಯಿತು, ನಾನು ದೊಡ್ಡ ನಷ್ಟ ಅನುಭವಿಸಿದೆ" ಎಂಬ ಆಲೋಚನೆಯಿಂದ ಅವರ ಹೃದಯದ ಬಡಿತ ಹೆಚ್ಚಾಯಿತು.

'ಜೆಯತ್' ನ್ನು ತಲುಪಿದಾಗ ಅವರು ಬಹಳ ಆತಂಕದಲ್ಲಿದ್ದರು. ಆದರೆ ಅವರು ಹಣದ ಚೀಲವನ್ನು ಎಲ್ಲಿ ಬಿಟ್ಟು ಬಂದಿದ್ದರೋ ಅದು ಅಲ್ಲಿಯೇ ಇತ್ತು. ಅತ್ಯಾಶ್ಚರ್ಯದಿಂದ ಬಾಬಾರವರು ನಾಣ್ಯಗಳನ್ನು ಎಣಿಸಿದರು. ಒಂದು ಬೆಳ್ಳಿ ರೂಪಾಯಿಯೂ ಕಡಿಮೆಯಾಗಿರಲಿಲ್ಲ. ಆ ಹಳ್ಳಿಯವರಾಗಲಿ, ಹಣದ ಬೆಲ್ಟ್ ಬಿಟ್ಟು ಬಂದಾಗಿನಿಂದ ಆ ವಿಶ್ರಾಂತಿ ಗೃಹದಲ್ಲಿ ತಂಗಿದ್ದ ನೂರಾರು ಜನ ಪ್ರಯಾಣಿಕರಾಗಲಿ ಯಾರೂ ಆ ಹಣದ ಚೀಲವನ್ನು ಮುಟ್ಟಿರಲಿಲ್ಲ. ಬರ್ಮಾ ದೇಶದ ಜನರ ಪ್ರಾಮಾಣಿಕತೆಯ ಬಗ್ಗೆ ಬಾಬಾರವರು ಯಾವಾಗಲೂ ಬಹಳ ಒಳ್ಳೆಯ ಅಭಿಪ್ರಾಯ ಹೊಂದಿದ್ದರಲ್ಲಿ ಆಶ್ಚರ್ಯವೇನಿಲ್ಲ.

ಮ್ಯಾಂಡಲೆ ಪಟ್ಟಣದ ಮಾರುಕಟ್ಟೆ ಪ್ರದೇಶದಲ್ಲಿ ನಡೆದ ಇನ್ನೊಂದು ಪ್ರಸಂಗವನ್ನು ಅವರು ಆಗಾಗ ನಮಗೆ ಹೇಳುತ್ತಿದ್ದರು. ಒಬ್ಬ ಮಹಿಳೆ ತನಗರಿವಿಲ್ಲದೆ ತನ್ನ ವಜ್ರದ ಕಿವಿಯೋಲೆಯನ್ನು ಅಂಗಡಿಯ ಮುಂದಿನ ಪಾದಾಚಾರಿ ದಾರಿಯಲ್ಲಿ ಬೀಳಿಸಿಕೊಂಡಿದ್ದಳು. ಎಲ್ಲರಿಗೂ ಕಾಣುವಂತೆ ಬಿದ್ದಿದ್ದ ಈ ಓಲೆಯನ್ನು ಅನೇಕ ಜನರು ಪ್ರತಿದಿನ ಹಾಯ್ದು ಹೋದರು. ಆದರೆ ಯಾರೂ ತೆಗೆದುಕೊಳ್ಳಲಿಲ್ಲ. ಪ್ರತಿದಿನ ಬೆಳಿಗ್ಗೆ ರಸ್ತೆಯ ಕಸಗುಡಿಸಲು ಒಬ್ಬ ಹೆಣ್ಣು ಮಗಳು ಬರುತ್ತಿದ್ದಳು. ಆಕೆಯು ಕಿವಿಯೋಲೆ ಇರುವ ಜಾಗಕ್ಕ ಬಂದಾಗ, ಅದನ್ನು ಎತ್ತಿ ಅದರ ಕೆಳಗಿನ ಕಸಗುಡಿಸಿ, ಅದು ಎಲ್ಲಿ ಬಿದ್ದಿತ್ತೋ ಅಲ್ಲಿಯೇ ಇಡುತ್ತಿದ್ದಳು. ಹೀಗೆ ಅದು ಏಳು ದಿನಗಳ ಕಾಲ ಮುಂದುವರಿಯಿತು. ನಂತರ ಒಬ್ಬ ಸರ್ಕಾರಿ ಅಧಿಕಾರಿ ಅದನ್ನು ತನ್ನ ಬಳಿ ಇಟ್ಟುಕೊಂಡು, "ಓಲೆ ಕಳೆದುಕೊಂಡಿರುವವರು ಬಂದು ಅದನ್ನು ಪಡೆಯುವಂತೆ ಪಟ್ಟಣದಲ್ಲಿ ಡಂಗೂರ ಸಾರಿಸಿದ. ಬರ್ಮಾದ ಜನರ ಪ್ರಾಮಾಣಿಕತೆ ಇಂತಹುದಾಗಿತ್ತು.

ಬರ್ಮಾದಲ್ಲಿ ಮನೆಗಳಿಗೆ ಯಾವಾಗಲೂ ಬೀಗ ಹಾಕುತ್ತಿರಲಿಲ್ಲ. ಇದು ಅಲ್ಲಿನ ಪದ್ಧತಿಯಾಗಿತ್ತು. ಬಿಡಾಡಿ ಪ್ರಾಣಿಗಳಿಂದ ರಕ್ಷಿಸಲು ಚಿಲಕ ಮಾತ್ರ ಹಾಕುತ್ತಿದ್ದರು. ಅವರು ಎಷ್ಟೇ ಶ್ರೀಮಂತರಾಗಿದ್ದರೂ ಅವರಿಗೆ ಎಂದೂ ಬೀಗದ ಅವಶ್ಯಕತೆ ಕಾಣಲಿಲ್ಲ. 1885ರಲ್ಲಿ ಬರ್ಮಾದ ರಾಜನನ್ನು ಪದಚ್ಯುತಿಗೊಳಿಸುವವರೆಗೆ ಈ ಪದ್ಧತಿ ರೂಢಿಯಲ್ಲಿತ್ತು. ದೇಶದ ಆಡಳಿತ ಬ್ರಿಟೀಷ್‌ರ ಕೈಗೆ ಹೋದ ಮೇಲೆ, ಅನೇಕ ವಿದೇಶಿಯರು ಅಲ್ಲಿ ಬಂದು ನೆಲೆಸಿದರು. ಇಡೀ ಸಾಮಾಜಿಕ ರಚನೆ ಕ್ರಮೇಣವಾಗಿ ಬದಲಾಯಿತು. ಕಳ್ಳತನ ಪ್ರಾರಂಭವಾಯಿತು. ಇದರಿಂದ ರಕ್ಷಿಸಿಕೊಳ್ಳಲು ಜನರು ಬೀಗ ಹಾಕಲು ಪ್ರಾರಂಭಿಸಿದರು. ನಂತರ ದರೋಡೆಕೋರರು ಬೀಗ ಒಡೆದು ದರೋಡೆ ಮಾಡುತ್ತಿದ್ದರು. ಸಾಮಾಜಿಕ ವ್ಯವಸ್ಥೆ ಕುಸಿದುಬಿದ್ದಾಗ, ಬಾಗಿಲಿಗೆ ಹಾಕುವ ಬೀಗ ರಕ್ಷಣೆ ಕೊಡುವುದಿಲ್ಲ.

ಬರ್ಮಾದ ರಾಜ, ಮಿಂಡೋನ್‌ಮಿನ್ ಆಡಳಿತ ನಡೆಸುತ್ತಿದ್ದಾಗ ಬಾಬಾರವರು ಮ್ಯಾಂಡಲೆಯಲ್ಲಿ ಸ್ಥಿರವಾಗಿ ನೆಲೆಸಿದ್ದರೋ ಇಲ್ಲವೋ ನನಗೆ ಗೊತ್ತಿಲ್ಲ. ಆದರೆ ಖಂಡಿತವಾಗಿ ಅವರು ಬರ್ಮಾದ ಕೊನೆಯ ರಾಜ 'ಥಿಬಾ'ನ ಆಳ್ವಿಕೆಯಲ್ಲಿ ಅಲ್ಲಿ ವಾಸಿಸುತ್ತಿದ್ದರು. ಈ ರಾಜನನ್ನು ಅವರು 'ಫೋಂಗಿ–ಕಿಂಗ್' ಅಂದರೆ 'ಮಾಂಕ್–ಕಿಂಗ್', ಭಿಕ್ಷು ರಾಜ ಎಂದು ಕರೆಯುತ್ತಿದ್ದರು. ಬಾಬಾರವರು ರಾಜನನ್ನು ಈ ರೀತಿಯಾಗಿ ಏಕೆ ಸಂಬೋಧಿಸುತ್ತಿದ್ದರು ಎಂಬುದು ನನಗೆ ತಿಳಿದಿರಲಿಲ್ಲ. ಅವರು ಸ್ವಲ್ಪ ದಿನ ಭಿಕ್ಷು ಆಗಿದ್ದುದರಿಂದಲೋ ಅಥವಾ ಅವರ ನಡವಳಿಕೆ ಭಿಕ್ಷುವಿನ ತರಹ ಬಹಳ ಧಾರ್ಮಿಕವಾಗಿದ್ದುದರಿಂದ ಆ ರೀತಿ ಕರೆಯುತ್ತಿದ್ದರೋ ಗೊತ್ತಿಲ್ಲ. ಆದರೆ ಬ್ರಿಟಿಷ್ ಚರಿತ್ರೆಕಾರರು ಇವರನ್ನು ಬಹಳ ಕೆಟ್ಟದಾಗಿ ಚಿತ್ರಿಸಿದ್ದಾರೆ. ಬಹುಶಃ ರಾಜಕೀಯ ಕಾರಣಗಳಿಂದಿರಬಹುದು. ಅವರು ಬಹಳ ವಿಭಿನ್ನವಾದ ವ್ಯಕ್ತಿಯಾಗಿದ್ದಿರಬೇಕು.

ಕೊನೆಯ ಪಕ್ಷ ರಾಜನ ವಿಷಯದಲ್ಲಿ ಬಾಬಾರವರ ಅಭಿಪ್ರಾಯ ಇದಾಗಿತ್ತು. 'ಥಿಬಾ'ನ ಸಾಮ್ರಾಜ್ಯವನ್ನು ಅವನಿಂದ ಕಸಿದುಕೊಂಡದ್ದು, ತದನಂತರ ರಾಜನ ದಯನೀಯ ಸ್ಥಿತಿ, ರಾಜನ ಅರಮನೆಯಿದ ಅವನನ್ನು ಖೈದಿಯಾಗಿ ಇರ್ರವಡ್ಡಿ ನದಿಯ ದಡದವರೆಗೆ ಕರೆದುಕೊಂಡು ಹೋಗಿ ಅಲ್ಲಿಂದ ತಾಯ್ನಾಡಿನಿಂದ ಹೊರದೂಡಿದ್ದಕ್ಕೆ ಬಾಬಾರವರು ಸಾಕ್ಷಿಯಾಗಿದ್ದರು. ಈ ಕಥೆ ಹೇಳುವಾಗ ಬಾಬಾರವರ ಮುಖದಲ್ಲಿ ಮತ್ತು ಧ್ವನಿಯಲ್ಲಿ ದುಃಖ ತುಂಬಿರುತ್ತಿತ್ತು. ಬರ್ಮಾವು ಸ್ವಾತಂತ್ರ್ಯ ಕಳೆದುಕೊಂಡಿದ್ದಕ್ಕೆ ಅವರಲ್ಲಿ ದುಃಖ ಉಂಟಾಗಿತ್ತು. ಬ್ರಿಟಿಷ್ ಆಳ್ವಿಕೆಯು ಭಾರತ ಮತ್ತು ಬರ್ಮಾ ಎರಡಕ್ಕೂ ಘೋರ ವಿಪತ್ತಾಗಿತ್ತು ಎಂದು ಅವರು ಭಾವಿಸಿದ್ದರು.

ಬರ್ಮಾದ ಕೊನೆಯ ರಾಜನ ಬಗ್ಗೆ ಬಾಬಾರವರಿಗೆ ಅತೀವವಾದ ಗೌರವವಿತ್ತು. ಅವರ ಪ್ರಕಾರ ಥಿಬಾ ಮತ್ತು ಅವರ ಸರ್ಕಾರವು ಭಾರತದ ವ್ಯಾಪಾರಿಗಳ ಬಗ್ಗೆ ಬಹಳ ವಿಶ್ವಾಸ ಮತ್ತು ಗೌರವ ಹೊಂದಿದ್ದರು. ಬ್ರಿಟನ್ ಮತ್ತು ಇತರೆ ದೇಶಗಳ ವ್ಯಾಪಾರಿಗಳು ಮತ್ಸರಪಡುವಷ್ಟು ಭಾರತದ ವ್ಯಾಪಾರಿಗಳ ಬಗ್ಗೆ ವಿಶ್ವಾಸ ಮತ್ತು ಗೌರವ ತೋರಿಸುತ್ತಿದ್ದರು. ಆಗಿನ ಕಾಲದಲ್ಲಿ ಮಾರಾಟದ ಸಾಮಾನುಗಳನ್ನು ಬರ್ಮಾದ ದಕ್ಷಿಣ ಭಾಗದಿಂದ ಇರ್ರವಡ್ಡಿ ನದಿ ದಾಟಿ ತೆಗೆದುಕೊಂಡು ಹೋಗಬೇಕಾಗಿತ್ತು. ಮ್ಯಾಂಡಲೆಯ ನದಿ ಬಂದರಿಗೆ ಬಂದಾಗ ಅಲ್ಲಿ ತಪಾಸಣೆ ಮಾಡಲಾಗುತ್ತಿತ್ತು. ಬರ್ಮಾದ ಸುಂಕದಕಟ್ಟೆಯ ಅಧಿಕಾರಿಗಳು ಭಾರತೀಯ ವ್ಯಾಪಾರಿಗಳನ್ನು ಬಹಳ ಸಭ್ಯವಾಗಿ ನಡೆಸಿಕೊಳ್ಳುತ್ತಿದ್ದರು. ಕೇವಲ ಯಾವ ಸಾಮಾನುಗಳನ್ನು ತಂದಿದ್ದೀರಿ ಎಂದು ಕೇಳುತ್ತಿದ್ದರು. ಅವರ ಪೆಟ್ಟಿಗೆಗಳನ್ನು ತೆರೆದುನೋಡಿ ಪರೀಕ್ಷಿಸುತ್ತಿರಲಿಲ್ಲ. ವ್ಯಾಪಾರಿಗಳು ಏನನ್ನು ಹೇಳುತ್ತಿದ್ದರೋ ಅದನ್ನು ನಂಬಿ ಸ್ವೀಕರಿಸುತ್ತಿದ್ದರು ಮತ್ತು ಅದರ ಪ್ರಕಾರ ಆಮದು ಸುಂಕ ವಿಧಿಸುತ್ತಿದ್ದರು. ಇತರೆ ದೇಶಗಳಿಂದ ಬರುವ ಜನರನ್ನು ಸಂಪೂರ್ಣವಾಗಿ ತಪಾಸಣೆ ಮಾಡಲಾಗುತ್ತಿತ್ತು.

ಭಾರತೀಯ ವ್ಯಾಪಾರಿಗಳಿಗೆ ದೊರೆಯುತ್ತಿದ್ದ ಈ ಆದ್ಯತೆಯು ಇತರೆ ವ್ಯಾಪಾರಸ್ಥರಲ್ಲಿ ದ್ವೇಷಭಾವನೆ ಹುಟ್ಟಿಸುತ್ತಿತ್ತು. ಅವರುಗಳ ಪ್ರತಿರೋಧದ ಫಲವಾಗಿ ಬರ್ಮಾದ ಸರ್ಕಾರಿ ಅಧಿಕಾರಿಗಳು ಭಾರತದ ವ್ಯಾಪಾರಿಗಳ ಪೆಟ್ಟಿಗೆಗಳನ್ನೂ ತೆರೆದು ನೋಡಲು ಪ್ರಾರಂಭಿಸಿದರು. ಆದರೆ ಪೆಟ್ಟಿಗೆಗಳಲ್ಲಿರುವ ಸಾಮಾನುಗಳನ್ನು ತಡಕಾಡುತ್ತಿರಲಿಲ್ಲ. ಮೇಲ್ಭಾಗದಲ್ಲಿದ್ದವುಗಳನ್ನು ಮಾತ್ರ ನೋಡುತ್ತಿದ್ದರು. ಭಾರತೀಯ ವ್ಯಾಪಾರಿಗಳಿಗೆ ಹೆಸರಿಗೆ ಮಾತ್ರ ತಪಾಸಣೆಯಾಗಿತ್ತು. ಸುಂಕದಕಟ್ಟೆಯ ಅಧಿಕಾರಿಗಳು ಭಾರತದ ವ್ಯಾಪಾರಿಗಳ ಮಾತನ್ನು ಪ್ರಶ್ನಿಸದೇ ಸ್ವೀಕರಿಸುತ್ತಿದ್ದರು.

ಇದೇ ಸ್ಥಿತಿ ಅನೇಕ ವರ್ಷಗಳವರೆಗೆ ಮುಂದುವರಿಯಿತು.ಆದರೆ, ಕೆಲವು ಭಾರತೀಯ ವ್ಯಾಪಾರಿಗಳು ಮೋಸ ಮಾಡಲು ಪ್ರಾರಂಭಿಸಿದ್ದರಿಂದ, ಅವರ ಮೇಲೆ ಬರ್ಮಾದ ಅಧಿಕಾರಿಗಳು ಇಟ್ಟಿದ್ದ ವಿಶ್ವಾಸ ಕೊನೆಗೂ ಅಂತ್ಯಗೊಂಡಿತು. ಬೆಲೆಬಾಳುವ ವೆಲ್‌ವೆಟ್ ಬಟ್ಟೆಗಳ ಮೇಲ್ಭಾಗದಲ್ಲಿ ಸಾಧಾರಣವಾದ, ಕಡಿಮೆ ಬೆಲೆಯ ಬಟ್ಟೆಗಳನ್ನಿಟ್ಟು ಪೂರ್ಣ ತೆರಿಗೆಯಿಂದ ತಪ್ಪಿಸಿಕೊಳ್ಳುತ್ತಿದ್ದರು. ಈ ಮೋಸ ಬೆಳಕಿಗೆ ಬಂದಿತು. ಕೆಲವರ ಈ ಮೋಸದಿಂದಾಗಿ ಇಡೀ ಭಾರತೀಯ ಸಮುದಾಯವನ್ನೇ ಅನುಮಾನಿಸುವಂತಾಯಿತು. ಒಂದು ಅಥವಾ ಎರಡು ಸತ್ತ ಮೀನುಗಳು ಇಡೀ ನೀರನ್ನು ಕಲುಷಿತಗೊಳಿಸುವಂತೆ, ಒಂದೆರಡು ಹನಿ ಹುಳಿ ಪಾತ್ರೆಯಲ್ಲಿನ ಇಡೀ ಹಾಲನ್ನು ಮೊಸರಾಗಿಸುವಂತೆ, ಒಂದೆರಡು ಕೆಟ್ಟ ಸೇಬಿನ ಹಣ್ಣುಗಳು ಪೆಟ್ಟಿಗೆಯಲ್ಲಿರುವ ಇಡೀ ಸೇಬಿನ ಹಣ್ಣುಗಳನ್ನು ಹಾಳು ಮಾಡಿದಂತಾಯಿತು.

ಪುರಾತನ ಕಾಲದ ಬರ್ಮಾದಲ್ಲಿ ಭಾರತೀಯರಿಗೆ 'ಕುಲ' ಎಂಬ ಗೌರವ ಸೂಚಕ ಪದವನ್ನು ಉಪಯೋಗಿಸುತ್ತಿದ್ದರು ಎಂದು ಬಾಬಾ ಹೇಳುತ್ತಿದ್ದರು. (ಬಹುಶಃ ಪಾಲಿಯ ಹಳೆಯ ಸಾಹಿತ್ಯದಲ್ಲಿ ಈ ಪದವನ್ನು ಪ್ರಯೋಗಿಸಲಾಗುತ್ತಿತ್ತು. ಉದಾಹರಣೆಗೆ 'ಮಹಾಕುಲ ಅನಾಥಪಿಂಡಿಕ' ಮತ್ತು 'ಮಹಾಕುಲ ವಿಶಾಖ'.) ಆದರೆ ಕೆಲವೇ ವರ್ಷಗಳಲ್ಲಿ, ಈ ದುರಾಸೆಯ ವ್ಯಾಪಾರಿಗಳ ಕೃತ್ಯದಿಂದ ಈ ಪದದ ಪ್ರಯೋಗವು 'ಕಾಳಾ' ಎಂಬ ಕೆಟ್ಟ ಅರ್ಥವನ್ನು ಪಡೆದುಕೊಂಡಿತು. ಒಬ್ಬ ವ್ಯಾಪಾರಸ್ಥನು ಅಪ್ರಾಮಾಣಿಕನಾದರೆ ತನಗೆ ತಾನೇ ಅಪಕೀರ್ತಿ ತಂದುಕೊಳ್ಳುತ್ತಾನೆ. ತನ್ನ ಹೆಸರನ್ನು ಕೆಡಿಸಿಕೊಂಡಾಗ ಅವನು ಎಲ್ಲವನ್ನೂ ಕಳೆದುಕೊಳ್ಳುತ್ತಾನೆ.

ವ್ಯಾಪಾರ ಮಾಡುವುದಕ್ಕೆ ಪ್ರಾಮಾಣಿಕತೆಯೇ ಆಧಾರವಾಗಿರಬೇಕೆಂದು ಬಾಬಾ ಭಾವಿಸಿಕೊಂಡಿದ್ದರು. ಪ್ರಾಮಾಣಿಕತೆ ಮಾತ್ರ ಸಂಪತ್ತು ಮತ್ತು ಶಾಂತಿಯನ್ನು ತರಲು ಸಾಧ್ಯ ಎಂದು ನಂಬಿದ್ದರು. ನಾನು ಹುಟ್ಟುವ ಮೊದಲೇ ಅವರು ವ್ಯಾಪಾರದಿಂದ ನಿವೃತ್ತಿ ಹೊಂದಿದ್ದರೂ, ಸರಿಯಾದ ರೀತಿಯಲ್ಲಿ ವ್ಯಾಪಾರ ಮಾಡುವುದರ ಬಗೆಗಿನ ಅವರ ಅಭಿಪ್ರಾಯಗಳು ಪ್ರಭಾವ ಬೀರುತ್ತಿದ್ದವು. ಗಿರಾಕಿಯೇ ವ್ಯಾಪಾರಕ್ಕೆ ಆಧಾರ ಮತ್ತು ವ್ಯಾಪಾರಸ್ಥನಿಗೆ ಅನ್ನದಾತ ಎಂದು ಅವರು ಹೇಳುತ್ತಿದ್ದರು. ತನಗೆ ಆಧಾರವಾಗಿರುವವನಿಗೆ ಮೋಸ ಮಾಡುವ ಆಲೋಚನೆಯನ್ನು ಕೇಳಿ ಅವರಿಗೆ ಗಾಬರಿಯಾಗುತ್ತಿತ್ತು; ಅದು ಅನ್ನ ನೀಡುವ ಕೈಗಳನ್ನು ಕಚ್ಚಿದಂತೆ ಎಂದು ಹೇಳುತ್ತಿದ್ದರು. ಕುಟುಂಬದ ಪ್ರತಿಯೊಬ್ಬರೂ ಅವರ ಅಭಿಪ್ರಾಯಗಳನ್ನು ಒಪ್ಪಿಕೊಂಡು ಅವರ ತತ್ವಗಳನ್ನೇ ವ್ಯಾಪಾರದಲ್ಲಿ ಅನುಸರಿಸುತ್ತಿದ್ದರು. ನನ್ನ ಒಬ್ಬ ಚಿಕ್ಕಪ್ಪನಂತೂ ಇದನ್ನು ಅತಿರೇಕಕ್ಕೆ ತೆಗೆದುಕೊಂಡು ಹೋಗಿದ್ದರು.

ಇನ್ನೂ ಅನೇಕ ರೀತಿಯಲ್ಲಿ ಬಾಬಾರವರು ನನ್ನ ಜೀವನದ ಮೇಲೆ ಗಾಢವಾದ ಪರಿಣಾಮ ಬೀರಿದರು. ಉದಾಹರಣೆಗೆ, ಅವರು ಪ್ರತಿನಿತ್ಯ ದಿನಪತ್ರಿಕೆ ಓದುವುದನ್ನು ಬಹಳ ಆನಂದಿಸುತ್ತಿದ್ದರು. ಆದರೆ ಅವರ ಮುಪ್ಪಿನ ಕಾಲದಲ್ಲಿ ಅವರ ಕಣ್ಣಿನ ದೃಷ್ಟಿ ಮಂದವಾಗಿದ್ದರಿಂದ ಪ್ರತಿದಿನವೂ ಅವರಿಗಾಗಿ ದಿನಪತ್ರಿಕೆಯನ್ನು ಓದಲು ನನಗೆ ಹೇಳುತ್ತಿದ್ದರು. ಬರ್ಮಾ ಮತ್ತು ಭಾರತದ ರಾಜಕೀಯ ಬೆಳವಣಿಗೆಗಳನ್ನು ಅವರು ಅವಲೋಕಿಸುತ್ತಿದ್ದರು. ಅವರ ಈ ಆಸಕ್ತಿಯು ನನ್ನ ಮೇಲೆ ಎಷ್ಟೊಂದು ಗಾಢ ಪರಿಣಾಮ ಬೀರಿತೆಂದರೆ, ದಿನಪತ್ರಿಕೆ ಓದುವುದು ನನಗೊಂದು ಚಟವಾಯಿತು.

ಬಾಬಾರವರು ಸಾಹಿತ್ಯ ಪ್ರೇಮಿಯಾಗಿದ್ದರು. ಜಾನಪದ ಕಥೆಗಳ ಮತ್ತು ಹಾಡುಗಳ ಭಂಡಾರವೇ ಅವರಲ್ಲಿತ್ತು. ಅವರು ನಮಗೆ ಲೆಕ್ಕವಿಲ್ಲದಷ್ಟು ಕತೆಗಳನ್ನು ಹೇಳಿದ್ದಾರೆ. ಅವರ ರಾಜಸ್ಥಾನಿ ದ್ವಿಪದಿಗಳು ನನ್ನ ಮೇಲೆ ಆಳವಾದ ಪರಿಣಾಮ ಬೀರಿದವು. ಅದೃಷ್ಟವಶಾತ್ ನನ್ನ ಉಪಾಧ್ಯಾಯರು ಮತ್ತು ಸ್ವತಃ ಕವಿಗಳೂ ಆಗಿದ್ದ ಶ್ರೀ ಕಲ್ಯಾಣದತ್ತ ದುಬೆಯವರು ಕವಿತೆಗಳ ಮೇಲೆ ಬಾಬಾರವರಿಗಿದ್ದ ಆಸಕ್ತಿಯನ್ನು ನನ್ನೊಡನೆ ಹಂಚಿಕೊಳ್ಳುತ್ತಿದ್ದರು. ನನಗೆ ಹಿಂದಿ ಭಾಷೆ ಕಲಿಸಲು ಮಕ್ಕಳ ಪುಸ್ತಕ ಕೊಡುವ ಬದಲು ಹಿಂದಿ ಕವಿತೆಗಳ ಪುಸ್ತಕ ಕೊಟ್ಟರು. ನಾನು ಹಿಂದಿಯಲ್ಲಿ ಓದಿದ ಮೊದಲ ಪುಸ್ತಕದ ಹೆಸರು 'ರಹಿಮಾನ್ ಸುಧಾ'. ಇದು ಮಧ್ಯಯುಗದ ಮುಸ್ಲಿಂ ಕವಿ, ರಹೀಮ್ ಅವರ ಕವನಗಳ ಸಂಗ್ರಹವಾಗಿತ್ತು.

ಈ ಪುಸ್ತಕದ ಅಧ್ಯಯನದಿಂದ ಪ್ರೇರೇಪಿತನಾಗಿ ನಾನು ನನ್ನ ಏಳು ಅಥವಾ ಎಂಟನೇ ವಯಸ್ಸಿನಲ್ಲಿ ನನ್ನ ಪ್ರಪ್ರಥಮ ಕವಿತೆಯನ್ನು ಬರೆದು, ನನ್ನ ಬಗ್ಗೆ ಅಭಿಮಾನ ತಳೆಯುತ್ತಾರೆಂದು ಭಾವಿಸಿ ಬಾಬರವರ ಮುಂದೆ ಓದಿದೆ. ನನ್ನ ಈ ಪ್ರಥಮ ಪ್ರಯತ್ನದಿಂದ ಅವರು ಜೋರಾಗಿ ಮತ್ತು ಬಹಳ ಹೊತ್ತು ನಕ್ಕದ್ದು ನನಗೆ ಆಶ್ಚರ್ಯ ಉಂಟುಮಾಡಿತು. ಅನೇಕ ವರ್ಷಗಳ ನಂತರವಷ್ಟೇ ಅವರು ಏಕೆ ಹಾಗೆ ನಕ್ಕರು ಎಂಬುದು ನನಗೆ ಅರ್ಥವಾಯಿತು. ರಹಿಮಾನ್ ಸುಧಾ ಕವನ ಸಂಕಲನದ ಪ್ರತಿಯೊಂದು ಕವನದಲ್ಲೂ ರಹೀಮ್ ಎಂದು ಬಂದಿತ್ತು. (ವಾಡಿಕೆಯಂತೆ ತಾನು ಬರೆದ ಕವಿತೆಯ ಕೊನೆಯಲ್ಲಿ ಕವಿ ತಮ್ಮ ಹೆಸರನ್ನು ನಮೂದಿಸಿದ್ದರು.) ಚಿಕ್ಕವಯಸ್ಸಿನಲ್ಲಿ ತಿಳಿಯದೆ ನನ್ನ ಕವಿತೆಯಲ್ಲೂ ರಹೀಮ್ ಹೆಸರು ಬರಬೇಕೇನೋ ಎಂದು ಯೋಚಿಸಿ ರಹೀಮ್ ಹೆಸರನ್ನು ಸೇರಿಸಿದ್ದೆ. ಬಾಬಾ ನಕ್ಕಿದ್ದರಲ್ಲಿ ಏನೂ ಆಶ್ಚರ್ಯವಿರಲಿಲ್ಲ! ಈ ಯುವ ಕವಿ ಮುಂದೊಂದು ದಿನ ಬಾಬಾರವರ ಮೇಲೆ ಒಂದು ಕವನ ಸಂಕಲನ ತಂದು ಪ್ರತಿ ಕವನದ ಕೊನೆಗೆ "ಬಾಬ" ಹೆಸರನ್ನು ನಮೂದಿಸುತ್ತಾನೆ ಎಂಬುದು ಬಹುಶಃ ಅವರಿಗೆ ತಿಳಿದಿರಲಿಲ್ಲ.

ಮ್ಯಾಂಡಲೆಯಿಂದ ಸುಮಾರು ಹತ್ತು ಮೈಲಿ ದೂರದಲ್ಲಿರುವ ತಗುಂಡೈಂಗ್ ಹಳ್ಳಿಯಲ್ಲಿ ಒಂದು ಗೋಶಾಲೆ ಇದೆ. ಇಲ್ಲಿ ಶ್ರದ್ಧಾವಂತ ಹಿಂದುಗಳು ಹಸುಗಳಿಗೆ ಸೂರು ಮತ್ತು ರಕ್ಷಣೆ ಒದಗಿಸಿದ್ದಾರೆ. ಪ್ರತೀ ವರ್ಷ 'ಗೋಪಾಷ್ಟಮಿ' (ಹಸುಗಳ ಹಬ್ಬ)ಯಂದು, ಈ ಗೋಶಾಲೆಯಲ್ಲಿ ಒಂದು ದೊಡ್ಡ ಜಾತ್ರೆ ನಡೆಯುತ್ತಿತ್ತು. ಈ ಜಾತ್ರೆಗೆ ಬಾಬಾರವರು ಕುಟುಂಬದ ಮಕ್ಕಳನ್ನು ಕರೆದುಕೊಂಡು ಹೋಗುತ್ತಿದ್ದರು. ಆ ಇಡೀ ದಿನ ನಾವು ಸ್ವತಂತ್ರರು, ಮಕ್ಕಳ ಎಲ್ಲ ಆಸೆ ಆಕಾಂಕ್ಷೆಗಳನ್ನು ಈಡೇರಿಸಿ

ಕೊಳ್ಳುತ್ತಿದ್ದೆವು. ಸಾಯಂಕಾಲ ಉಪನ್ಯಾಸಗಳು ಮತ್ತು ಭಾಷಣಗಳಿಂದ ಕೂಡಿದ ಸಾರ್ವಜನಿಕ ಸಮಾರಂಭವಿರುತ್ತಿತ್ತು. ಇದರಲ್ಲಿ ಬಾಬಾರವರು ಬಹಳ ಆಸಕ್ತಿ ವಹಿಸುತ್ತಿದ್ದರು. ಒಮ್ಮೆ ದುಬೆ ಮಾಸ್ತರರು ನಾನು ಈ ಸಮಾರಂಭದಲ್ಲಿ ಓದಲು ಏಳೆಂಟು ಪುಟಗಳ ಒಂದು ಭಾಷಣ ತಯಾರಿಸಿದರು. ಇದರ ಬಗ್ಗೆ ಬಾಬಾರವರಿಗೆ ತಿಳಿದಾಗ, "ಏಕೆ ಓದುವುದು? ನೀನು ನೆನಪಿಟ್ಟುಕೊಂಡು ಮಾತಾಡು; ಅದು ಬಹಳ ಚೆನ್ನಾಗಿರುತ್ತದೆ" ಎಂದು ಹೇಳಿದರು. ಅಂತೆಯೇ ನಾನು ಭಾಷಣವನ್ನು ಕಂಠಪಾಠ ಮಾಡಿ ಸಮಾರಂಭದಲ್ಲಿ ಹೇಳಿದೆ. ನನ್ನ ಭಾಷಣವನ್ನು ಕೇಳಿ ಬಾಬಾರವರು ಬಹಳ ಸಂತೋಷಪಟ್ಟರು. ಬಹುಶಃ ಅವರು ಭವಿಷ್ಯದಲ್ಲಿ ನಡೆಯುವುದಕ್ಕೆ ತರಬೇತಿ ನೀಡುತ್ತಿದ್ದರು ಎನಿಸುತ್ತದೆ.

ಭಾರತೀಯ ಕುಟುಂಬಗಳ ಪದ್ಧತಿಯಂತೆ, ನಮ್ಮ ಮನೆಯಲ್ಲಿ ಮಧ್ಯಾಹ್ನ ಹನ್ನೆರಡರಿಂದ ಒಂದು ಗಂಟೆಗೆ ಮತ್ತು ರಾತ್ರಿ ಏಳರಿಂದ ಎಂಟು ಗಂಟೆಗೆ ಊಟವಿರುತ್ತಿತ್ತು. ಆದರೆ ಬಾಬರವರು ಬರ್ಮೀಯರು ಮಾಡುವಂತೆ ಮುಂಚಿತವಾಗಿ ಊಟ ಮಾಡುತ್ತಿದ್ದರು. ಬೆಳಗಿನ ಹತ್ತು ಗಂಟೆಗೆ ಮತ್ತು ಸಾಯಂಕಾಲ ಐದು ಗಂಟೆಗೆ ಊಟ ಮಾಡುತ್ತಿದ್ದರು. ಅವರ ಸೊಸೆಯಂದಿರಿಗೆ ಇದು ಹೆಚ್ಚುವರಿ ಕೆಲಸವಾದರೂ ಅವರು ಬಹಳ ಸಂತೋಷದಿಂದ ಮಾಡಿ ಬಾಬಾರವರನ್ನು ತೃಪ್ತಿಪಡಿಸುತ್ತಿದ್ದರು. ಬೇಗ ಊಟ ಮಾಡುವ ಈ ಪದ್ಧತಿಯನ್ನು ವಿಪಶ್ಯನ ಶಿಬಿರಗಳಲ್ಲಿ ಅನುಸರಿಸಲಾಗುತ್ತದೆ ಮತ್ತು ಇದು ಆರೋಗ್ಯಕ್ಕೆ ಬಹಳ ಒಳ್ಳೆಯದೆಂದು ನನಗೆ ತೋರುತ್ತದೆ. ವಾಸ್ತವವಾಗಿ ನಾನು ರಾತ್ರಿ ತಡವಾಗಿ ಊಟ ಮಾಡಿದರೆ ನನಗೆ ಕಸಿವಿಸಿಯೆನಿಸುತ್ತದೆ.

ಬಾಬಾರವರು ಪ್ರಾರ್ಥಿಸುವುದನ್ನು, ಧರ್ಮಗ್ರಂಥಗಳನ್ನು ವಾಚಿಸುವುದನ್ನು, ಮಂತ್ರ ಹೇಳುವುದನ್ನು, ಉಪವಾಸ ವ್ರತ ಅಥವಾ ಯಾವುದೇ ಧಾರ್ಮಿಕ ವಿಧಿ ಅಥವಾ ನಿತ್ಯಾಚರಣೆಯನ್ನು ಮಾಡಿದ್ದನ್ನು ನಾವು ಎಂದೂ ನೋಡಿಲ್ಲ. ನಗರದಲ್ಲಿ ಹಿಂದೂಗಳ ಸತ್ಯನಾರಾಯಣ ಸ್ವಾಮಿ ದೇವಸ್ಥಾನವಿತ್ತು. ಅವರು ಎಂದೂ ಈ ದೇವಸ್ಥಾನಕ್ಕೆ ಹೋಗಲಿಲ್ಲ. ಈ ದೇವಸ್ಥಾನದ ವಾರ್ಷಿಕ ಜಾತ್ರೆಯಲ್ಲಿ ದೇವಸ್ಥಾನವನ್ನು ಸಿಂಗರಿಸುತ್ತಿದ್ದರು. ಆದರೆ ಬಾಬಾರವರು ಇದನ್ನು ಗಣನೆಗೆ ತೆಗೆದುಕೊಳ್ಳುತ್ತಿರಲಿಲ್ಲ. ಬಾಬಾರವರ ಮಗಳು, ಮಕ್ಕಳಿಲ್ಲದ ಯುವ ವಿಧವೆ ನಮ್ಮ ಜೊತೆ ವಾಸಿಸುತ್ತಿದ್ದರು. ಈ ಅತ್ತೆ, ಚಂದಾಬಾಯಿಗೆ ಮಕ್ಕಳನ್ನು ಕಂಡರೆ ಯಾವಾಗಲೂ ಬಹಳ ಪ್ರೀತಿ. ಆದರೆ ಕೆಲವು ವೇಳೆ ಕ್ಷುಲ್ಲಕ ಕಾರಣಗಳಿಗಾಗಿ ಬಾಬಾರವರ ಮೇಲೆ ರೇಗುತ್ತಿದ್ದರು. "ಅಪ್ಪ, ನೀನು ಪ್ರಾರ್ಥನೆ ಮಾಡಲ್ಲ, ಜಪ ಮಾಡಲ್ಲ, ತೀರ್ಥಯಾತ್ರೆಗೆ ಹೋಗಲ್ಲ, ಉಪವಾಸ ವ್ರತನೂ ಮಾಡಲ್ಲ! ಖಂಡಿತವಾಗಿ ನೀನು ನಿನ್ನ ಇಡೀ ಜೀವನವನ್ನು ವ್ಯರ್ಥವಾಗಿ ಕಳೆಯುತ್ತೀಯ" ಎಂದು ಜೋರು ಮಾಡುತ್ತಿದ್ದರು.

ಬಾಬಾರವರು ಅವರ ಮಾತಿಗೆ ಉತ್ತರಿಸದೆ ನಸುನಗುತ್ತಿದ್ದರು. ಅಧಾರ್ಮಿಕ ವ್ಯಕ್ತಿ ಎಂದು ಪರಿಗಣಿಸಲ್ಪಟ್ಟ ಇವರು ಮ್ಯಾಂಡಲೆಯಿಂದ ಐದಾರು ಮೈಲಿ ದೂರದಲ್ಲಿದ್ದ, ಬುದ್ಧರ ಪ್ರಸಿದ್ಧವಾದ ಮಹಾಮುನಿ ವಿಗ್ರಹವಿರುವ ಅರಕಾನ್ ಪಗೋಡಕ್ಕೆ ಮಕ್ಕಳನ್ನು ತಮ್ಮ ಜೊತೆ ಆಗಿಂದಾಗ್ಗೆ ಕರೆದುಕೊಂಡು ಹೋಗುತ್ತಿದ್ದರು. ಅಲ್ಲಿ ಅವರು ಸ್ವಲ್ಪ ಸಮಯ ಮೌನವಾಗಿ ಕುಳಿತಿರುತ್ತಿದ್ದರು. ಅವರು ಅಲ್ಲಿ ಕುಳಿತು ಧ್ಯಾನ ಮಾಡುತ್ತಿದ್ದರೋ ಅಥವಾ ಏನೂ ಮಾಡದೆ ಸುಮ್ಮನೆ ಕುಳಿತಿರುತ್ತಿದ್ದರೋ ನನಗೆ ಗೊತ್ತಿಲ್ಲ. ಬಹುಶಃ ಆ ಸ್ಥಳದ ವಾತಾವರಣವು ಅವರನ್ನು ಆಕರ್ಷಿಸಿರಬಹುದು. ಬಹುತೇಕ ಪೂಜಾ ಸ್ಥಳಗಳಲ್ಲಿ ಶಾಂತಿಯನ್ನು ಕಾಣುವುದಿರಲಿ ಅಲ್ಲಿ ಸ್ವಚ್ಛತೆಯೂ ಇರುವುದಿಲ್ಲ, ವ್ಯವಸ್ಥಿತವಾದ ವಾತಾವರಣ ಇರಲೂ ಸಾಧ್ಯವಿಲ್ಲ. ನಿರಂತರವಾದ ಪ್ರಾರ್ಥನೆ ಮತ್ತು ಪಠನದಿಂದ, ಲೆಕ್ಕವಿಲ್ಲದಷ್ಟು ಧಾರ್ಮಿಕ ವಿಧಿ ಮತ್ತು ನಿತ್ಯಾಚರಣೆಗಳಿಂದ ಸೃಷ್ಟಿಯಾದ ಕಸದಿಂದ ಅವುಗಳನ್ನು ಮಲಿನಗೊಳಿಸುತ್ತಾರೆ. ಆದರೆ ಇಲ್ಲಿ ಮಹಾಮುನಿ ಬುದ್ಧರ ಪದತಲದಲ್ಲಿ ಕೇವಲ ಪರಿಶುದ್ಧ ಸ್ವಚ್ಛತೆ ಮತ್ತು ಪರಿಶುದ್ಧವಾದ ಶಾಂತಿಯನ್ನು ಬಿಟ್ಟು ಬೇರೇನೂ ನಮಗೆ ಕಾಣಲಿಲ್ಲ. ಈ ಪರಿಶುದ್ಧವಾದ ವಾತಾವರಣವು ಸ್ವಾಭಾವಿಕವಾಗಿಯೇ ಅಲ್ಲಿಗೆ ಬಂದವರ ಮೇಲೆ ಒಳ್ಳೆಯ ಪರಿಣಾಮ ಬೀರುತ್ತಿತ್ತು. ಅಲ್ಲಿ ನನಗೆ ಯಾವಾಗಲೂ ಬಹಳ ನಿಶ್ಚಲತೆ ಮತ್ತು ಶಾಂತಿಯ ಅನುಭವವಾಗುತ್ತಿದ್ದದ್ದು ನನಗೆ ನೆನಪಿದೆ.

ಕೆಲವು ವೇಳೆ ಬಾಬಾರವರು ಬರ್ಮಾದ ಹಿಂದಿನ ರಾಜರುಗಳ ಅರಮನೆಯನ್ನು ತೋರಿಸಲು ಮಕ್ಕಳನ್ನು ಮ್ಯಾಂಡಲೆ ಕೋಟೆಗೆ ಕರೆದುಕೊಂಡು ಹೋಗುತ್ತಿದ್ದರು. ಅವರು ಬಹಳ ಸೂಕ್ಷ್ಮವಾಗಿ ಅರಮನೆಯ ವಿವಿಧ ಕಟ್ಟಡಗಳ ಬಗ್ಗೆ ನಮಗೆ ವಿವರಿಸುತ್ತಿದ್ದರು: ಸಿಂಹಾಸನದ ಕೊಠಡಿ, ಸಭಾಂಗಣ, ರಾಜ ಕುಟುಂಬದ ಖಾಸಗಿ ನಿವಾಸ ಮುಂತಾದವು. ಇಡೀ ಅರಮನೆಯನ್ನು ತೋರಿಸಿದ ಮೇಲೆ ಅವರು ತಪ್ಪದೇ ಕೋಟೆಯ ಆವರಣದಲ್ಲಿದ್ದ ಹಳೆಯ ಬೋಧಿವೃಕ್ಷದ ಬಳಿಗೆ ನಮ್ಮನ್ನು ಕರೆದುಕೊಂಡು ಹೋಗುತ್ತಿದ್ದರು. ಅಲ್ಲಿ ಅವರು ಸ್ವಲ್ಪ ಸಮಯ ವಿಶ್ರಾಂತಿ ಪಡೆಯುತ್ತಿದ್ದರು. ನನಗೆ ಸ್ಪಷ್ಟವಾಗಿ ನೆನಪಿದೆ. ಈ ಮರದ ಕೆಳಗೂ ನಾನು ಅರಕಾನ್ ಪಗೋಡದಲ್ಲಿದ್ದ ಶಾಂತಿಯ ವಾತಾವರಣವನ್ನು ಅನುಭವಿಸಿದ್ದೆ. ಈ ಸ್ಥಳವು ವಾಸ್ತವವಾಗಿ ನನ್ನನ್ನು ಎಷ್ಟೊಂದು ಆಕರ್ಷಿಸಿತೆಂದರೆ, ಪ್ರೌಢಶಾಲೆಯ ಅಂತಿಮ ಪರೀಕ್ಷೆಗಿಂತ ಮುಂಚೆ ನೀಡಿದ್ದ ಹತ್ತು ದಿನಗಳ ಅಧ್ಯಯನದ ರಜೆಯಲ್ಲಿ ನಾನು ಈ ಮರದ ಕೆಳಗೆ ಸಮಯ ಕಳೆದೆ. ಪ್ರತಿದಿನ ಬೆಳಿಗ್ಗೆ ಪುಸ್ತಕ ಮತ್ತು ಊಟ ತೆಗೆದುಕೊಂಡು ನನ್ನ ಸೈಕಲ್ ಮೇಲೆ ಕೋಟೆಯೊಳಗಿದ್ದ ಬೋಧಿವೃಕ್ಷದ ಬಳಿ ತೆರಳುತ್ತಿದ್ದೆ. ಇಡೀ ದಿನ ಬೋಧಿ ವೃಕ್ಷ (ಅರಳಿಮರ) ದ ಕೆಳಗೆ ಅಧ್ಯಯನ ಮಾಡಿ ಸಾಯಂಕಾಲ ಮನೆಗೆ ಮರಳುತ್ತಿದ್ದೆ. ನಮ್ಮ ಮನೆಯಿಂದ ಬಹಳ ದೂರವಿದ್ದರೂ ನಾನು ಚಿಂತಿಸಲಿಲ್ಲ. ಈ ಮರದ ಕೆಳಗೆ ನಾನು ಕಂಡ ಶಾಂತಿಯು ನನ್ನ ಮೇಲೆ ಅಳಿಸಲಾಗದ ಪ್ರಭಾವ ಬೀರಿತು.

ಈ ರೀತಿಯಾಗಿ ಬಾಬರವರು ನನ್ನ ಯುವ ಮನಸ್ಸಿನಲ್ಲಿ ಸಾಹಿತ್ಯದ ಮತ್ತು ಪರಿಶುದ್ಧ ಧರ್ಮದ ಬೀಜವನ್ನು ನೆಟ್ಟರು. ಸಮಯ ಬಂದಾಗ ಅವು ಮೊಳಕೆಯೊಡೆದು, ಹೂ ಅರಳಿಸಿ, ಫಲ ನೀಡಿದವು.

ಬಾಬಾರವರು ಬರ್ಮಾಕ್ಕೆ ವಲಸೆ ಹೋಗಿದ್ದರಿಂದ ಆ ಪವಿತ್ರ ಭೂಮಿಯಲ್ಲಿ ನಾನು ಜನಿಸಿದೆ. ವ್ಯಾಪಾರಸ್ಥ ಕುಟುಂಬದಲ್ಲಿ ಜನಿಸಿದ್ದರಿಂದ ಜಗತ್ತಿನ ಯಾವುದೇ ದೇಶದಲ್ಲಿ ನಾನು ಬದುಕಿದ್ದರೂ ಅಗಾಧವಾದ ಪ್ರಾಪಂಚಿಕ ಸಂಪತ್ತನ್ನು ಗಳಿಸುತ್ತಿದ್ದೆ, ಆದರೆ ಈ ಧರ್ಮ ಭೂಮಿಯಲ್ಲಿ ಜನಿಸಿದ್ದರಿಂದ ಸಯಾಜಿ ಉ ಬಾ ಖಿನ್ ಅವಂತಹ, ಈ ಜಗತ್ತಿನಲ್ಲೇ ಬದುಕಿದ್ದ ನಿಜವಾದ ಸಂತ ವ್ಯಕ್ತಿಯ ಸಂಪರ್ಕಕ್ಕೆ ಬರುವ ಅಗಾಧವಾದ ಅವಕಾಶ ದೊರೆಯಿತು. ಈ ಮಹಾನ್ ಆಚಾರ್ಯರು ಬೆಲೆಕಟ್ಟಲಾಗದ ಧರ್ಮರತ್ನವನ್ನು ಪಡೆಯಲು ನನಗೆ ಸಹಾಯ ಮಾಡಿದರು. ಇದು ನನ್ನ ಜೀವನವನ್ನು ಅಪರಿಮಿತವಾಗಿ ಶ್ರೀಮಂತಗೊಳಿಸಿತು.

## ವಿಪಶ್ಯನ–ಪಂಥರಹಿತ ಮಾರ್ಗ

ಸಾಧ್ವಿ ವಿನೋದಿಬಾಯಿ

(ಸಯಾಜಿ ಉ ಬಾ ಖಿನ್ ಜರ್ನಲ್‌ನಿಂದ ಅನುವಾದಿಸಲಾಗಿದೆ)

ಪಂಥೀಯತೆ ಎಂದರೆ ಏನು? "ನನ್ನ ಪಂಥವೇ ಅತ್ಯುತ್ತಮ; ನನ್ನ ಪಂಥದ ಜನರು ಮಾತ್ರ ಧಾರ್ಮಿಕರು ಮತ್ತು ಅವರು ಮಾತ್ರ ಶ್ರೇಷ್ಠರು ಮತ್ತು ಸತ್ಯವಂತರು." ಈ ರೀತಿಯ ಆಲೋಚನೆ ಪಂಥೀಯತೆಯಲ್ಲಿರುತ್ತದೆ.

ಪಂಥೀಯತೆ ಮತ್ತು ನಿಜವಾದ ಧರ್ಮ ಇವುಗಳ ಮಧ್ಯದ ವ್ಯತ್ಯಾಸವನ್ನು ಜನರು ಅರ್ಥ ಮಾಡಿಕೊಳ್ಳುವುದಿಲ್ಲ. ಪಂಥೀಯತೆಯು ನಾಲ್ಕು ಮೂಲ ತತ್ವಗಳ ಮೇಲೆ ನಿಂತಿದೆ :

1) ವಿವಿಧ ಪಂಥಗಳ ಜನರು ತಮ್ಮ ತಮ್ಮ ದೇವರುಗಳಲ್ಲಿ ಅಥವಾ ಪಂಥ ಸಂಸ್ಥಾಪಕರಲ್ಲಿ ನಂಬಿಕೆಯಿಟ್ಟಿರುತ್ತಾರೆ.

2) ಪ್ರತಿಯೊಂದು ಪಂಥವು ವ್ಯಕ್ತಿಗಳು ಧರಿಸುವ ಉಡುಪುಗಳ ಬಗ್ಗೆ ತಮ್ಮದೇ ಆದ ಅಭಿಪ್ರಾಯಗಳನ್ನು ಹೊಂದಿದೆ. ಈ ಉಡುಪುಗಳನ್ನು ಧರಿಸುವ ಜನರನ್ನು ಮಾತ್ರ ಧಾರ್ಮಿಕರೆಂದು ಪರಿಗಣಿಸಲಾಗುವುದು; ಉಳಿದವರನ್ನು ಅಧಾರ್ಮಿಕರೆಂದು ಪರಿಗಣಿಸಲಾಗುವುದು.

3) ಪಂಥವು ನಿಗದಿಪಡಿಸಿದ ಧಾರ್ಮಿಕ ವಿಧಿ ಮತ್ತು ನಿತ್ಯಾಚರಣೆಗಳನ್ನು ಯಾರು ಅನುಸರಿಸುತ್ತಾರೋ ಅವರು ಮಾತ್ರ ಧಾರ್ಮಿಕರು,ಉಳಿದವರು ಅಧಾರ್ಮಿಕರು ಎಂದು ತಿಳಿಯಲಾಗುವುದು.

4) ಪ್ರತಿಯೊಂದು ಪಂಥವು ತನ್ನದೇ ಆದ ತತ್ವಸಿದ್ಧಾಂತವನ್ನು ಹೊಂದಿದೆ. ಇದನ್ನು ನಂಬುವವರು ಮಾತ್ರ ಧಾರ್ಮಿಕ ವ್ಯಕ್ತಿಗಳು, ಉಳಿದವರು ಧಾರ್ಮಿಕರಲ್ಲ ಎಂದು ತೀರ್ಮಾನಿಸಲಾಗುವುದು.

ವಿಪಶ್ಯನ ಧ್ಯಾನದ ಅಭ್ಯಾಸದಲ್ಲಿ ಈ ಪರಿಕಲ್ಪನೆಗಳಿಗೆ ಯಾವುದೇ ಪ್ರಾಮುಖ್ಯತೆ ಇಲ್ಲ. ಪರಿಶುದ್ಧ ಧರ್ಮವು ಸಾರ್ವತ್ರಿಕವಾದುದು.

ಪ್ರಕೃತಿಯು ತನ್ನ ಶಾಶ್ವತ ನಿಯಮಗಳನ್ನು ಹೊಂದಿದೆ. ಈ ನಿಯಮಗಳನ್ನು ಅರ್ಥಮಾಡಿಕೊಳ್ಳುವುದು ಮತ್ತು ಅವುಗಳ ಪ್ರಕಾರ ಜೀವನ ನಡೆಸುವುದು ಮತ್ತು ಮನಸ್ಸನ್ನು ಅದರ ಅಶುದ್ಧತೆಗಳಿಂದ, ವಿಕಾರಗಳಿಂದ ಮುಕ್ತಗೊಳಿಸುವುದೇ ವಿಪಶ್ಯನ ಧ್ಯಾನದ ಗುರಿಯಾಗಿದೆ. ಪ್ರತಿಯೊಬ್ಬ ವ್ಯಕ್ತಿಯು ಈ ಮಲಿನತೆಗಳ ಕಾರಣದಿಂದ ವ್ಯಾಕುಲನಾಗುತ್ತಾನೆ ಮತ್ತು ಅವುಗಳಿಂದ ಮುಕ್ತನಾಗುವುದರಿಂದ ಶಾಂತಿ ಮತ್ತು ಸಾಮರಸ್ಯವನ್ನು ಅನುಭವಿಸುತ್ತಾನೆ.

ಈ ಧ್ಯಾನ ಸಾಧನೆಯಲ್ಲಿ ಬುದ್ಧರು ಮೂರು ಹಂತಗಳನ್ನು ಕೊಟ್ಟರು. ಅವೇ ಶೀಲ, ಸಮಾಧಿ, ಪನ್ನಾ. ಶೀಲ ಎಂದರೆ, ಶರೀರ ಮತ್ತು ಮಾತಿನ ಕ್ರಿಯೆಗಳಿಂದ ಯಾರಿಗೂ ಹಾನಿ ಮಾಡದಿರುವುದು. ಈ ಪ್ರಪಂಚದಲ್ಲಿರುವ ಯಾರೇ ಆಗಲಿ, ಅವರು ಯಾವುದೇ ಪಂಥಕ್ಕೆ ಸೇರಿರಲಿ ಇದನ್ನು ವಿರೋಧಿಸಲು ಹೇಗೆ ಸಾಧ್ಯ? ಒಳ್ಳೆಯ ಜೀವನ ನಡೆಸುವುದರಿಂದ ಪ್ರತಿಯೊಬ್ಬ ವ್ಯಕ್ತಿಯು ತನ್ನಲ್ಲಿ, ತನ್ನ ಕುಟುಂಬದಲ್ಲಿ, ಸಮಾಜದಲ್ಲಿ, ದೇಶದಲ್ಲಿ ಮತ್ತು ಇಡೀ ವಿಶ್ವದಲ್ಲಿ ಶಾಂತಿ ಮತ್ತು ಸಾಮರಸ್ಯವನ್ನು ತರಲು ಸಾಧ್ಯ.

ಎರಡನೆಯ ಹಂತ 'ಸಮಾಧಿ', ಮನಸ್ಸಿನ ಏಕಾಗ್ರತೆ, ಆದರೆ ಈ ಏಕಾಗ್ರತೆಯ ವಸ್ತುವು ರಾಗ ಮತ್ತು ದ್ವೇಷಗಳಿಂದ ಕೂಡಿರಬಾರದು. ಸಾರ್ವತ್ರಿಕವಾದ, ಸ್ವಾಭಾವಿಕವಾದ ಮತ್ತು ಸಹಜ ಉಸಿರಾಟವನ್ನು ಗಮನಿಸುತ್ತಾ ಸಮಾಧಿಯನ್ನು ಬೆಳೆಸಿಕೊಳ್ಳಲಾಗುವುದು. ಏಕಾಗ್ರತೆಯ ವಸ್ತುವು ಈ ಶರೀರದಿಂದ ಹೊರಗಿನ, ಕಲ್ಪಿತ ವಸ್ತುವಲ್ಲ. ಯಾವ ಪಂಥವೂ ಇದನ್ನು ವಿರೋಧಿಸಲು ಸಾಧ್ಯವಿಲ್ಲ.

ಮೂರನೆಯ ಮತ್ತು ಬಹಳ ಮುಖ್ಯವಾದ ಹಂತ 'ಪನ್ನಾ'– 'ಭಾವನ–ಮಯಾ–ಪನ್ನಾ'(ಅನುಭವ ಜ್ಞಾನ). ಶರೀರದ ಮೇಲಿನ ಸಂವೇದನೆಗಳನ್ನು ವಸ್ತುನಿಷ್ಠವಾಗಿ ಗಮನಿಸುತ್ತಾ, ಅವುಗಳ ಅಶಾಶ್ವತತೆಯನ್ನು ಅರಿತು ಅವುಗಳ

**RNI. No. : KARKAN/2015/68727. Postal Regn. No.: RNP/KA/BGS/2253/2023-25**
**Published On 10th & Posted On 20th of March Posted At : Bengaluru PSO, B'luru 26. Price(Annual)Rs.30.**

ಬಗೆಗೆ ಸಮತೆಯಿಂದಿರುವುದರಿಂದ ವ್ಯಕ್ತಿಯು ಮನಸ್ಸಿನ ಮಲಿನತೆಗಳಿಂದ ಮುಕ್ತನಾಗುತ್ತಾನೆ.

ಸುಪ್ತ ಮನಸ್ಸು ಶರೀರದ ಹಿತಕರ ಮತ್ತು ಅಹಿತಕರ ಸಂವೇದನೆಗಳ ಜೊತೆ ಗುರುತಿಸಿಕೊಳ್ಳುತ್ತಾ ಪ್ರತಿ ಕ್ಷಣವೂ ರಾಗ ಮತ್ತು ದ್ವೇಷವನ್ನು ಉತ್ಪತ್ತಿ ಮಾಡುತ್ತಿರುತ್ತದೆ. ಇದನ್ನು ವಿಪಶ್ಯನ ಧ್ಯಾನದಿಂದ ಮಾತ್ರ ಅನುಭವ ಮಾಡಿಕೊಳ್ಳಲು ಸಾಧ್ಯವಾಗುತ್ತದೆ.

ಏಕಾಗ್ರತೆಗೆ ಶರೀರದ ಹೊರಗಿನ ವಸ್ತುವನ್ನು ಉಪಯೋಗಿಸದೆ ಒಳನೋಟದ ಧ್ಯಾನದಿಂದ ವ್ಯಕ್ತಿಯು ತನ್ನನ್ನು ತಾನು ಮಲಿನತೆಗಳಿಂದ ಮುಕ್ತಗೊಳಿಸಿಕೊಳ್ಳುವ ಒಂದು ವೈಜ್ಞಾನಿಕ ಪದ್ಧತಿಯನ್ನು ಯಾವ ಪಂಥ ವಿರೋಧಿಸುತ್ತದೆ?

ಈ ವೈಜ್ಞಾನಿಕ ಧ್ಯಾನ ವಿಧಾನದ ಮೇಲೆ ಯಾವ ಪಂಥವೂ ವಿಶೇಷ ಅಧಿಕಾರವನ್ನು ಹೊಂದಿರಲು ಸಾಧ್ಯವಿಲ್ಲ. ಯಾವ ವ್ಯಕ್ತಿಯು ಈ ಧ್ಯಾನ ವಿಧಾನವನ್ನು ಅನುಸರಿಸಿ ಸಾಧನೆ ಮಾಡುತ್ತಾನೋ ಅವನು ಯಶಸ್ವಿಯಾಗುತ್ತಾನೆ.

ಈ ಧ್ಯಾನದ ಅಭ್ಯಾಸದಲ್ಲಿ ಧ್ಯಾನದ ವಸ್ತುವು ಹೊರಗಿನದಲ್ಲ; ಹೊರಗಿನ ಬಂಧನವಿಲ್ಲ. ಈ ಧ್ಯಾನ ವಿಧಾನವನ್ನು ಅಭ್ಯಾಸ ಮಾಡುವುದರಿಂದ ತನ್ನ ಸ್ವಂತ ಧಾರ್ಮಿಕ ತತ್ವಸಿದ್ಧಾಂತದ ಬಗ್ಗೆ ಸರಿಯಾದ ತಿಳುವಳಿಕೆ ಬರುತ್ತದೆ. ಈ ಧರ್ಮ ರತ್ನವನ್ನು ಯಾರೇ ಅಭ್ಯಾಸ ಮಾಡಲಿ ಅವರು ಅದರ ಪ್ರಯೋಜನಗಳನ್ನು ಅನುಭವಿಸಲು ಪ್ರಾರಂಭಿಸುತ್ತಾರೆ. ಇತರೆ ಯಾವುದೇ ಧ್ಯಾನ ವಿಧಾನದಿಂದ ಮನಸ್ಸನ್ನು ಮಲಿನತೆಗಳಿಂದ ಸಂಪೂರ್ಣ ಮುಕ್ತಗೊಳಿಸುವುದು ಸಾಧ್ಯವಿಲ್ಲ.

ನಾನು ಆಕಸ್ಮಿಕವಾಗಿ ವಿಪಶ್ಯನ ಧ್ಯಾನ ಶಿಬಿರಕ್ಕೆ ಬಂದೆ. ಅತ್ಯಂತ ಪ್ರೀತಿ ಮತ್ತು ಕರುಣೆಯಿಂದ ಗೋಯಂಕಾಜಿಯವರು ನನ್ನನ್ನು ಪರಿಶುದ್ಧ ಧರ್ಮದಲ್ಲಿ ನೆಲೆಗೊಳಿಸಿದರು. ಅವರಿಗೆ ನನ್ನ ಅನಂತ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ. ಆದರೆ ಈ ಮಾರ್ಗ ಸಿಕ್ಕಿರುವ ವಿಷಯವೇ ಬಹಳ ಪುಣ್ಯದ್ದು.

**ಪ್ರತಿಯೊಬ್ಬರೂ ಶಾಂತಿ ಮತ್ತು ಸುಖವನ್ನು ಅನುಭವಿಸಲಿ.**

## ವಿದ್ಯಾರ್ಥಿಗೆ ಒಂದು ಪತ್ರ

ಫಾದರ್ ಅಂಥೋಣಿ ಡಿ ಮೆಲ್ಲೊ

(ಸಯಾಜಿ ಉ ಬಾ ಖಿನ್ ಜರ್ನಲ್‌ನಿಂದ ಅನುವಾದಿಸಲಾಗಿದೆ)

**ಏಪ್ರಿಲ್ 1, 1985ರಂದು ಅಮೆರಿಕದಲ್ಲಿದ್ದ ಒಬ್ಬ ವಿಪಶ್ಯನ ವಿದ್ಯಾರ್ಥಿಗೆ ಬರೆದ ಒಂದು ಪತ್ರದ ಸಾರಾಂಶ**

ಅಮೆರಿಕದಲ್ಲಿ ವಿಪಶ್ಯನ ಧ್ಯಾನವನ್ನು ಅಭ್ಯಾಸ ಮಾಡುತ್ತಾರೆ ಎಂಬುದು ನಿಜವಾಗಿಯೂ ಕುತೂಹಲಕರವಾದುದು...

ವಿಪಶ್ಯನದಿಂದ ಕೆಲವರು ಹೆಚ್ಚು ಮತ್ತು ಕೆಲವರು ಕಡಿಮೆ ಪ್ರಯೋಜನ ಪಡೆಯುತ್ತಾರೆ. ಅದು ಸ್ವಾಭಾವಿಕ. ಏಕೆಂದರೆ ವ್ಯಕ್ತಿಗಳು ಒಂದೇ ತರಹ ಇರುವುದಿಲ್ಲ. ಅವರು ವಿವಿಧ ಪದ್ಧತಿಗಳಿಂದ ಸಹಾಯ ಪಡೆಯುತ್ತಾರೆ.

ಆದರೆ ಯಾವುದು ಪ್ರಶ್ನಾತೀತವೆಂದರೆ, ವಿಪಶ್ಯನವು ಕ್ಯಾಥೋಲಿಕ್ ಧರ್ಮಕ್ಕೆ ಪರಿಪೂರ್ಣವಾಗಿ ಹೊಂದುತ್ತದೆ. ಅವೆರಡರ ಮಧ್ಯೆ ಯಾವುದೇ ವಿರೋಧವಿಲ್ಲ. ಬದಲಾಗಿ, ವ್ಯಕ್ತಿಯು ಒಳ್ಳೆಯ ಕ್ರಿಶ್ಚಿಯನ್ ಮತ್ತು ಒಳ್ಳೆಯ ಕ್ಯಾಥೋಲಿಕ್ ಆಗಲು ವಿಪಶ್ಯನವು ಸಹಾಯ ಮಾಡುತ್ತದೆ ಮತ್ತು ನಿಮ್ಮ ಸ್ವಂತ ಅನುಭವವೇ ಇದಕ್ಕೆ ಸಾಕ್ಷಿಯಾಗಿದೆ.

ನಿನ್ನ ಆಧ್ಯಾತ್ಮಿಕ ಪ್ರಗತಿಗೆ ನನ್ನ ಶುಭಾಶಯಗಳು.

ನಿನ್ನ ವಿಶ್ವಾಸಿ,
ಅಂಥೋಣಿ ಡಿ ಮೆಲ್ಲೊ, ಎಸ್.ಜೆ.

**ಧಮ್ಮ ಪಫುಲ್ಲಾ, ಬೆಂಗಳೂರು**

**10 ದಿನದ ಶಿಬಿರಗಳು**:2023:ಫೆಬ್ರವರಿ24–7ಮಾರ್ಚ್ 10–21, 29–9 ಏಪ್ರಿಲ್ 12–23, 26–7 ಮೇ 24–4 ಜೂನ್ 7–18,21–2 ಜುಲೈ 5–16,26–6, ಆಗಸ್ಟ್ 9–20, 23–3 ಸೆಪ್ಟಂಬರ್, 6–1, 6–17, 21–29 ಅಕ್ಟೋಬರ್, 2–13, 25–5 ನವೆಂಬರ್, 8–19, 22–3, ಸೆಪ್ಟಂಬರ್ 6–17, 20–31.

**ವಿಳಾಸ :** ಧಮ್ಮ ಪಫುಲ್ಲ, ಆಲೂರು, ದಾಸನಪುರ ಹೋಬಳಿ, ಬೆಂಗಳೂರು. ರಾಷ್ಟ್ರೀಯ ಹೆದ್ದಾರಿ–4ರಲ್ಲಿ, ಹಿಮಾಲಯ ಡ್ರಗ್ ಕಂಪನಿಯ ಎದುರಿನ ಮಾಕಳಿ ಕ್ರಾಸ್‌ಗೆ ಬಂದರೆ ಆಟೋರಿಕ್ಷಾ ಸಿಗುತ್ತವೆ. ಬೆಂಗಳೂರು ಸಿಟಿ ಬಸ್ ನಿಲ್ದಾಣದಿಂದ (ಮೆಜೆಸ್ಟಿಕ್)ನಗರ ಸಾರಿಗೆ ಬಸ್ ಸಂಖ್ಯೆ :256,258,258ಸಿ. ಸಂಪರ್ಕ ಸಂಖ್ಯೆಗಳು: 99725 88377, 63615 70725, 99725 88377, 99009 55930. **ಇ–ಮೇಲ್** : info@ paphulla. dhamma. org;website; www.vridhamma. org.

**ಧಮ್ಮ ನಗರಿ ವಿಪಶ್ಯನ ಧ್ಯಾನ ಕೇಂದ್ರ, ದಾವಣಗೆರೆ.**

ಹತ್ತು ದಿನದ ಶಿಬಿರಗಳು –2024:ಏಪ್ರಿಲ್ 18 ರಿಂದ 29, ಮೇ 8 ರಿಂದ 19, ಮೇ 29 ರಿಂದ ಜೂನ್ 9, ಜೂನ್ 19 ರಿಂದ 30, ಜುಲೈ 10 ರಿಂದ 21, ಜುಲೈ 31 ರಿಂದ ಆಗಸ್ಟ್ 11, ಆಗಸ್ಟ್ 21 ರಿಂದ ಸೆಪ್ಟಂಬರ್ 1, ಸೆಪ್ಟಂಬರ್ 11 ರಿಂದ 22, ಅಕ್ಟೋಬರ್ 16 ರಿಂದ 27, ನವೆಂಬರ್ 6 ರಿಂದ 17, ನವೆಂಬರ್ 27 ರಿಂದ ಡಿಸೆಂಬರ್ 8, ಡಿಸೆಂಬರ್ 18 ರಿಂದ 29.

ಮೂರು ದಿನದ ಶಿಬಿರಗಳು 2024– ಮಾರ್ಚ್ 14 ರಿಂದ 17 ಮತ್ತು 28 ರಿಂದ 31 ಅಕ್ಟೋಬರ್ 3–6. ವೆಬ್‌ಸೈಟ್ :https://www.dhamma.org/en/schedules/schnagari

**ಗೂಗಲ್ ಮ್ಯಾಪ್ :** https://maps.app.goo.gl/VnxXg Kuatwfne3r96

Contact Numbers : 90087 33008, 94485 88789, 87226 05694

**ವಿಳಾಸ :** ಶಂಕರನಹಳ್ಳಿ ರಸ್ತೆ, ಕೊಂಡಜ್ಜಿ ಬುಳ್ಳಾಪುರ, ಹರಿಹರ ತಾಲೂಕು.

**ಧಮ್ಮ ನದಿ, ವಿಪಶ್ಯನ ಧ್ಯಾನಕೇಂದ್ರ ಉಡುಪಿ ಜಿಲ್ಲೆ**

ನಿರ್ಮಾಣ ಕಾರ್ಯ ಆರಂಭವಾಗಿದೆ. ಪ್ರತಿ ಭಾನುವಾರ ಬೆಳಿಗ್ಗೆ 9 ರಿಂದ 1 ರವರೆಗೆ ಧ್ಯಾನ ಕಾರ್ಯಕ್ರಮ ಇರುತ್ತದೆ. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ : 9449773942, 9880173542, 8792173942.

**ಧಮ್ಮ ಸುಖಾಲಯ, ಬೆಂಗಳೂರು.**

ಪ್ರತಿ ಭಾನುವಾರ ಒಂದು ದಿನದ ಶಿಬಿರವಿರುತ್ತದೆ.

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ :ಪ್ರಕಾಶ್‌ಚಂದ್ರ 89898 66927, ಚೆಲುವರಾಜು9900452939, ಸಂತೋಷ್ ಧರ್ಮರಾಜ್ 87620 86089 ನೋಂದಣಿಗೆ:https:/sukhalaya. dhamma.org/en/tapodana.

ದಾರಿ ತೋರಿಸಲು: https://maps.app.goo.gl/EVGKU

**ಧಮ್ಮವನ, ಅಂತರರಾಷ್ಟ್ರೀಯ ವಿಪಶ್ಯನ ಧ್ಯಾನಕೇಂದ್ರ,**
**ನಾಡಪ್ಪನಹಳ್ಳಿ – 571 617, ಮೈಸೂರು ಜಿಲ್ಲೆ.**

**ಹತ್ತು ದಿನದ ಶಿಬಿರಗಳು : 2024 ಮಾರ್ಚ್ 20–31, ಏಪ್ರಿಲ್ 10–21**

ನಿರಂತರಾಗಿ 2 ಮತ್ತು ಮೂರು ದಿನದ ಶಿಬಿರಗಳನ್ನು ಆಯೋಜಿಸಲಾಗುತ್ತಿದೆ. ಆನ್‌ಲೈನ್‌ನಲ್ಲಿ ನೋಂದಣಿ ಮಾಡಿಕೊಳ್ಳಲು: www.dhamma.org/schedules/schvana.

ಹೆಚ್ಚಿನ ಮಾಹಿತಿಗೆ : 88805 19658

**ವಂತಿಗೆ : ವಾರ್ಷಿಕ: ರೂ.30, ಆಜೀವ: ರೂ.500. ವಂತಿಗೆ ಸಂದಾಯ ಮಾಡಬೇಕಾದ ಬ್ಯಾಂಕ್ ಖಾತೆ :3194101004234; IFSC code:CNRB0003194; ಕೆನರಾ ಬ್ಯಾಂಕ್, ನಾಗರಬಾವಿ, ಬೆಂಗಳೂರು. ಖಾತೆದಾರರು:ಕರ್ನಾಟಕ ವಿಪಶ್ಯನ ಪ್ರಚಾರ ಸಮಿತಿ. ಹಣ ಸಂದಾಯದ ವಿವರ ಮತ್ತು ಪತ್ರಿಕೆ ಕಳುಹಿಸಬೇಕಾದ ಅಂಚೆ ವಿಳಾಸವನ್ನು ಶ್ರೀಮತಿ ಪುಷ್ಪ .ಎಸ್., ಮೊ.ಸಂ:7337734934 ಗೆ ಎಸ್.ಎಮ್.ಎಸ್.ಮಾಡಿರಿ.**

**ಮುದ್ರಕರು: ಬಿ.ಪ್ರದೀಪ ಕುಮಾರ, ಪ್ರಕಾಶಕರು: ಶ್ರೀಮತಿ ಆರ್. ಚಂದ್ರಮತಿ** ಕರ್ನಾಟಕ ವಿಪಶ್ಯನ ಪ್ರಚಾರ ಸಮಿತಿ ಟ್ರಸ್ಟ್ ಪರವಾಗಿ.
**ಮುದ್ರಣ:** ಐರಣಿ ಆಫ್‌ಸೆಟ್ ಪ್ರಿಂಟರ್ಸ್, 4ನೇ ತಿರುವು, ಕೆ.ಹೆಚ್.ಬಿ.ಕಾಲೋನಿ,ದಾವಣಗೆರೆ–2.**ಪ್ರಕಾಶನ:**ಕರ್ನಾಟಕ ವಿಪಶ್ಯನ ಪ್ರಚಾರ ಸಮಿತಿ ಟ್ರಸ್ಟ್, #93, 30ನೇ ಅಡ್ಡರಸ್ತೆ, ಬನಶಂಕರಿ 2ನೇ ಹಂತ, ಬೆಂಗಳೂರು–560070. **ಗೌರವ ಸಂಪಾದಕರು: ಜಿ.ಟಿ. ಗೋವಿಂದಪ್ಪ**

**Printed by** B.Pradeep Kumar, **Published by** Smt. R. Chandramathi on be half of Karnataka Vipassana Prachara Samithi Trust and **Printed at**: Airani Offset Printers, 4th Cross, K.H.B.Colony, Davangere-2 and **Published at** Karnataka Vipassana Prachara Samithi Trust, #93, 30th Cross, Banashankari 2nd Stage, Bengaluru - 70. **Editor: G.T. Govindappa,**

ಇಂದ:
**ಕರ್ನಾಟಕ ವಿಪಶ್ಯನ ಪ್ರಚಾರ ಸಮಿತಿ ಟ್ರಸ್ಟ್**
#93, 30ನೇ ಅಡ್ಡರಸ್ತೆ, ಬನಶಂಕರಿ 2ನೇ ಹಂತ,
ಬೆಂಗಳೂರು–560070.

ಗೆ,